ಕಲ್ಯಾಣ ಕಿರಣ

ಬೆಲೆ. 3 ರೂ ಜನವರಿ- 1994



|| ಓಂ ಶ್ರೀ ಗುರುಬಸವಲಿಂಗಾಯ ನಮಃ ||

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವ ಕ್ರಾಂತಿ ದಿನದ ಅಂಗವಾಗಿ

1994ನೇ ಜನವರಿ 12, 13, 14 ಮತ್ತು 15 ರಂದು
ನಡೆಯಲಿರುವ ಚಾರಿತ್ರಿಕ, ಆರನೆಯ

ಶರಣ ಮೇಳ

ಧ್ವಜಾರೋಹಣದ ಸನ್ನಿವೇಶದಲ್ಲಿ ಹಾಡಲಾಗುವ ಗೀತೆ

ಧ್ವಜಗೀತೆ

ಹೇ ಶರಣ ಬಂಧುಗಳೇ, ಬಸವ ಧ್ವಜವು ಹಾರುತಿದೆ
ಕ್ರಾಂತಿ ಕಹಳೆ ಮೊಳಗುತಿದೆ! ಬನ್ನಿ ಬನ್ನಿ ಬನ್ನಿರೆಲ್ಲ ಭೇದಭಾವ
ತೊಡೆದೀಗ ||

ಜಾತಿಯತೆಯ ತಿಮಿರ ತೊಡೆದು ಧಾರ್ಮಿಕತೆಯ ತತ್ತ್ವ ಹಿಡಿದು
ಸಮತಾ ಪತಾಕೆಯ ಬಸವ ತತ್ತ್ವದೊಡನೆ ಮೆರೆಸುತ ||
ಧರ್ಮವೆಮದು ಸದ್ಧರ್ಮ ಧರ್ಮವೆಮದು ಮಾನವಧರ್ಮ
ಧರ್ಮವೆಮದು ರಾಷ್ಟ್ರಧರ್ಮ ಧರ್ಮವೆಮದು ವಿಶ್ವಧರ್ಮ || ೧ ||

ಬಸವಾದಿ ಪ್ರಮಥರ ದಿವ್ಯ ಪರಂಪರೆಯವರು
ಮನುಕುಲದ ಸ್ವಾತಂತ್ರ್ಯಕೆ ದುಡಿವೆವೆಂಬ ಛಲದವರು ||
ಎಮ್ಮ ಬಾಳ ಕಣಕಣವು ಬಸವ ಪಾದಕರ್ಪಣ
ಎಮ್ಮ ಚೆನ್ನ ತನುಮನವು ನಾಡಗುಡಿಗೆ ತರ್ಪಣ || ೨ ||

ಜಾತಿಮತ ಪಂಥಗಳ ಕೀಳು ಭಾವ ಅಳಿಸುವಾ
ಭಿನ್ನಭೇದ ಮರೆತು ಬಾಳ್ವ ಪ್ರೇಮಭಾವ ಬೆಳೆಸುವಾ ||
ಶಾಂತಿ ಸ್ನೇಹ ಪ್ರೇಮ ಸಮತೆ ಅಂಗವಿಸಿ ಬಾಳುವಾ
ಬಸವ ಧರ್ಮ ಪ್ರಣತೆಯುರಿಗೆ ಬಾಳ ತೈಲವೆರೆಯುವಾ || ೩ ||

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ವಿ.ಸೂ.: ಶರಣ ಮೇಳಕ್ಕೆ ಬರುವವರು ಹಾಡಬೇಕಾದ ಗೀತೆಗಳು
ಇರುವ ಈ ಪ್ರತಿಯನ್ನು ಜೊತೆಗೆ ತನ್ನಿರಿ.

|| ಓಂ ಶ್ರೀಗುರು ಬಸವಲಿಂಗಾಯನಮಃ ||

ಶರಣ ಮೇಳಕ್ಕೆ ಸ್ವಾಗತ

ಬನ್ನಿ ಬನ್ನಿ ನೋಡಬನ್ನಿ ಸಂಗಮದ ಕ್ಷೇತ್ರವ
ಬನ್ನಿ ಬನ್ನಿ ನೋಡಬನ್ನಿ ಶರಣ ಮೇಳವ || ಪಲ್ಲವಿ ||

ಶ್ರೀ ಸಂಗಮೇಶನ ಭವ್ಯ-ತಾಣ ಸಂಗಮ
ವಿಶ್ವಗುರು ಬಸವಣ್ಣನ ಐಕ್ಯ ಕ್ಷೇತ್ರ ಸಂಗಮ
ಮಹಾಮನೆಯ ಹೊಂದಿರುವ ದಿವ್ಯ ಕ್ಷೇತ್ರ ಸಂಗಮ
ಶರಣ ಮೇಳ ನಡೆಯುತಿರುವ ಧರ್ಮಕ್ಷೇತ್ರ ಸಂಗಮ || ೧ ||

ಕಲ್ಯಾಣ ನಾಡಿನೊಳು ಅಂದು ಒಂದು ಕ್ರಾಂತಿಯಾಗಿ
ಬಸವ ಸುತರು ಚದುರಿದರು ಹತ್ತು ಹಲವು ದಿಕ್ಕಿಗೆ
ನೆಲೆಯು ಇರದ ಮಕ್ಕಳಂತೆ ಸೋತು ಬಳಲಿ ಬಾಳುತಿರೆ
ಶರಣ ಮೇಳ ತೌರ ತೋರಿ ನಲುಮೆಯಿಂದ ಕರೆಯುತಿದೆ || ೨ ||

ಬಸವ ಕ್ರಾಂತಿ ದಿವ್ಯ ದಿನದಿ ನಡೆಯುತಿದೆ ಶರಣ ಮೇಳ
ನಾಡ ಮೂಲೆ ಮೂಲೆಯಿಂದ ಸೇರುತಿದೆ ಶರಣ ಬಳಗ
ನಮ್ಮ ನಿಮ್ಮ ಬಾಳಿನ ಬನ್ನವನ್ನು ಕಳೆಯುವ
ವಚನ ಮೇಳ, ತತ್ತ್ವ ಮೇಳ, ಕಮ್ಮನೆಯ ಶರಣ ಮೇಳ || ೩ ||

ತಮಿಳುನಾಡು, ತೆಲುಗುನಾಡು, ಮಹಾರಾಷ್ಟ್ರ, ಹಿಂದಿನಾಡು
ಕರುನಾಡಿನ ಮೂಲೆಯಿಂದ ಬರುತಿಹರು ಸಂಗಮಕೆ
ಬಸವ ಲತೆಯು ಅರಳಿಸಿರುವ ಶರಣ ಸುಮಗಳಿವರ ನೋಡಿ
ಮಾಲೆ ಮಾಡಿ ಇಟ್ಟಿದೆ ಸಂಗಮದ ಶರಣ ಮೇಳ || ೪ ||

ರಚನೆ : ಜಗದ್ಗುರು ಮಾತೆ ಮಹಾದೇವಿ

ಕಪಿಲ ಸಿದ್ಧ ಮಲ್ಲಿಕಾರ್ಜುನಾ
ನಿಮ್ಮ ಸಂಗನ ಬಸವಣ್ಣ ಬಂದು
ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದರೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು.

- ಶಿವಯೋಗಿ ಸಿದ್ಧರಾಮೇಶ್ವರ

ಅಖಂಡ ವಚನ ಪಠಣ ಸಪ್ತಾಹ ಕಾರ್ಯಕ್ರಮ
ಪ್ರಾರಂಭೋತ್ಸವ

ದಿ. 9-1-1994 ಭಾನುವಾರ — ಸಮಯ : ಬೆಳಿಗ್ಗೆ 8 ಗಂಟೆ

ಬಸವಣ್ಣ ನಡೆದುದೇ ಮಾರ್ಗ, ನುಡಿದುದೇ ವೇದ
ಭಕ್ತಿಯ ಕುಳವನು ಬಸವಣ್ಣನೇ ಬಲ್ಲನು
ಪ್ರಸಾದದ ನೆಲೆಯನು ಬಸವಣ್ಣನೇ ಬಲ್ಲನು
ಬಸವಣ್ಣ ನಡೆದುದೇ ಮಾರ್ಗ ಅಖಿಳಗಣಂಗಳಿಗೆ
ನುಡಿದುದೇ ವೇದ ಮಹಾಪುರುಷರಿಗೆ

- ಶ್ರೀ ಮರುಳ ಶಂಕರದೇವರು

ಬಸವ ಧರ್ಮ ಪೀಠದ ಮಹಾಮನೆಯ ಬಸವ ಮಂಟಪದಲ್ಲಿ ಅಖಂಡ ವಚನ ಪಠಣ ಕಾರ್ಯಕ್ರಮವು ಪ್ರಾರಂಭವಾಗಲಿದ್ದು, ಒಬ್ಬೊಬ್ಬರು ಒಂದು ಗಂಟೆಯ ಕಾಲ ವಚನ ಪಠಣವನ್ನು ಮಾಡಲಿದ್ದಾರೆ. ಪ್ರತಿದಿನ ವಿಶೇಷ ಪೂಜಾನಂತರ ಬೆಳಗಿನ 6 ಗಂಟೆಗೆ ವಚನ ಪಠಣ ಆರಂಭವಾಗಿ ರಾತ್ರಿ 10ರ ವರೆಗೆ ನಡೆಯುವುದು. ಈ ರೀತಿ ಪಠಣ ಕಾರ್ಯಕ್ರಮವು ಒಂದು ವಾರ ಕಾಲ ನಡೆಯಲಿದ್ದು ಭಾನುವಾರ ದಿ.16-1-1994 ರಂದು ಬೆಳಿಗ್ಗೆ 8 ಗಂಟೆಗೆ ಮಂಗಲಗೊಳ್ಳಲಿದೆ. ವಚನ ಪಠಣದ ಮಧ್ಯೆ ಶ್ರೀ ಗುರು ಬಸವಲಿಂಗ ಮಂತ್ರ ಪಠಣವೂ ವಿಶೇಷ ಪೂಜೆಯೊಡನೆ ಆಗಾಗ ನಡೆಯುತ್ತದೆ.

ದಿ. 9-1-94 ರಂದು ಬೆಳಿಗ್ಗೆ 8 ಗಂಟೆಗೆ ಬಸವ ಧರ್ಮದ ಮಹಾಜಗದ್ಗುರು ಪೀಠದ ಪೀಠಾಧೀಶರಾದ ಪೂಜ್ಯ ಶ್ರೀಮನ್ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಪ್ರಥಮವಾಗಿ ಪಠಣವನ್ನು ಮಾಡಿ, ಸಪ್ತಾಹವನ್ನು ಉದ್ಘಾಟಿಸುವರು. ಮಹಾತೀರ್ಥವನ್ನು ಅಂದು ಸಿದ್ಧಪಡಿಸುತ್ತಿದ್ದು, ಕರುಣ ಪ್ರಸಾದವನ್ನು ಎಲ್ಲರಿಗೂ ವಿತರಿಸಲಾಗುವುದು.

ಶರಣ ಬಂಧುಗಳಿಗೆ ಸೂಚನೆ

ನಿಯಮ : ಸ್ನಾನ ಮಾಡಿ, ಮಡಿವಸ್ತ್ರಗಳನ್ನುಟ್ಟು, ಅಲ್ಲಿ ಒದಗಿಸುವ ವಿಶೇಷ ಮೇಲು ವಸ್ತ್ರವನ್ನು ಹೊದ್ದು ಪಠಣ ಮಾಡಬೇಕು. ವಚನ ಪಠಣವನ್ನು ಒಂದು ಧಾರ್ಮಿಕ ವಿಧಿಯನ್ನಾಗಿ ರೂಪಿಸಿಕೊಳ್ಳಬೇಕು. ಇದಕ್ಕೆ ನೆರವಾಗುವಂತೆ 'ವಚನ ಸಂಗಮ' ಕನ್ನಡ ಪುಸ್ತಕವು ಕನ್ನಡ, ತೆಲುಗು, ತಮಿಳು, ಮರಾಠಿ ಭಾಷೆಗಳಲ್ಲಿ ಭಾವಾರ್ಥ ಸಹಿತವಾಗಿ ಲಭ್ಯವಿರುತ್ತದೆ. ಬೆಲೆ : 5-50

ಶರಣ ಸಂಕೀರ್ತನ ಕಾರ್ಯಕ್ರಮ

ಭಾನುವಾರ ದಿ. 9-1-1994 ರಿಂದ ಪ್ರತಿ ದಿನ ರಾತ್ರಿ 7-30 ರಿಂದ ಶರಣರ ಚರಿತ್ರೆ ಕುರಿತು "ಶರಣ ಸಂಕೀರ್ತನ" ಕಾರ್ಯಕ್ರಮವನ್ನು

ಕೀರ್ತನಾಚಾರ್ಯ

ಶರಣ. ಟಿ.ಎಂ. ಚಂದ್ರಶೇಖರ ಶಾಸ್ತ್ರಿಗಳು
ವೀರೇಶ್ವರ ಪುಣ್ಯಾಶ್ರಮ, ಗದಗ

ಇವರು ನಡೆಸಿಕೊಡಲಿದ್ದಾರೆ.

ಭಾನುವಾರ ದಿ. 9-1-1994ರ ಕಾರ್ಯಕ್ರಮ ವಿವರ

ಶರಣ ಮಂಟಪ

ಶರಣರ ಭಾವಚಿತ್ರ ಮಳಿಗೆಯ ಉದ್ಘಾಟನೆ

ಬೆಳಿಗ್ಗೆ 10-30

ಶ್ರೀಗುರು ಬಸವಣ್ಣನವರೇ ಆದಿ ಪ್ರಥಮರಾಗಿ ಶರಣರ ಪರಂಪರೆಯು ಸಾಗಿ ಬಂದಿದ್ದು, ಆದರ್ಶಮಯ ಬದುಕನ್ನು ಬಾಳಿರುವ ಶರಣರ ಸುಂದರ ತೈಲವರ್ಣ ಚಿತ್ರಗಳ ಪ್ರದರ್ಶನವನ್ನು ಮಹಾಮನೆ ಮಹಾಮಠದಲ್ಲಿ ಏರ್ಪಡಿಸಲಾಗಿದ್ದು, ಈ ಶರಣ ಮಂಟಪದ ಉದ್ಘಾಟನೆಯನ್ನು

ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭುಸ್ವಾಮಿಗಳು
ಮಂಗಲಮಠ, ಶಿರಗುಪ್ಪಿ

ಇವರು ನೆರವೇರಿಸಲಿದ್ದಾರೆ.

* * *

ಸರ್ವಜ್ಞಮೂರ್ತಿ ಶರಣಧಾಮ (ಅತಿಥಿಗೃಹ)ಕ್ಕೆ ಶಿಲಾನ್ಯಾಸ

ಸಮಯ 10-45

ಧನ ದಾಸೋಹಿಗಳ ನೆರವಿನಿಂದ 50 ಕೋಣೆಗಳುಳ್ಳ "ಅಕ್ಕನಾಗಲಾಂಬಿಕಾ ಶರಣಧಾಮ" ಅತಿಥಿ ಗೃಹವು ಈಗಾಗಲೇ ಸಿದ್ಧವಾಗಿದ್ದು, ಪೂರ್ಣಗೊಳ್ಳುವ ಹಂತದಲ್ಲಿದೆ. ದಾನಿಗಳ ಸತ್‌ಸಂಕಲ್ಪದಂತೆ ಎರಡನೆಯ ಅತಿಥಿ ಗೃಹವನ್ನು ನಿರ್ಮಿಸಲು ಯೋಜನೆ ಸಿದ್ಧಪಡಿಸಿದ್ದು, ಈ "ಸರ್ವಜ್ಞಮೂರ್ತಿ ಶರಣಧಾಮ"ದ ಶಿಲಾನ್ಯಾಸವನ್ನು ಪೀಠಾಧೀಶರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ನೆರವೇರಿಸಲಿದ್ದಾರೆ.

* * *

ಶ್ರೀ ಬಸವೇಶ್ವರ ಚಿಕಿತ್ಸಾಲಯ ಪ್ರಾರಂಭೋತ್ಸವ

ಬೆಳಿಗ್ಗೆ 11-15

ಬಸವ ಧರ್ಮಪೀಠದ ಆಶ್ರಯದಲ್ಲಿ ಮಹಾಮನೆ ಮಹಾಮಠದ ಆವರಣದಲ್ಲಿ "ಶ್ರೀ ಬಸವೇಶ್ವರ ಚಿಕಿತ್ಸಾಲಯ (Clinic)"ವನ್ನು ಪ್ರಾರಂಭಿಸುತ್ತಿದ್ದು, ಡಾ|| ಸೋದರಿ ಶಶಿಕಲಾ ಎಂ.ಬಿ.ಬಿ.ಎಸ್. ಅವರು ಸೇವಾ ಮನೋಭಾವದಿಂದ ಚಿಕಿತ್ಸೆ ನೀಡಲಿದ್ದಾರೆ.

ಶ್ರೀ ಬಸವೇಶ್ವರ ಚಿಕಿತ್ಸಾಲಯವನ್ನು ಪೀಠಾಧೀಶರಾದ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ,
ಶರಣ. ಡಾ|| ಸಿ.ಡಿ. ಕಲಬುರ್ಗಿ, ಎಂ.ಎಸ್. ಬಾಗಲಕೋಟೆ ಅವರು ಉದ್ಘಾಟಿಸಲಿದ್ದಾರೆ.

ಬಸವ ಧರ್ಮಪೀಠವು ಕಲ್ಪಿಸಿರುವ ಈ ವಿಶೇಷ ಅವಕಾಶವನ್ನು ಕೂಡಲಸಂಗಮ ಮತ್ತು ಸುತ್ತಣ ಗ್ರಾಮಗಳವರು ಉಪಯೋಗ ಪಡಿಸಿಕೊಳ್ಳುವಿರಾಗಿ ನಂಬುತ್ತೇವೆ.

— ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ

ಶರಣ ಮೇಳ - ಬಸವ ಧರ್ಮ ಸಂಸತ್ ಸಭೆ

ದಿ. 12-1-1994, ಬುಧವಾರ ಚಿಂತನಗೋಷ್ಠಿ ಬೆಳಿಗ್ಗೆ 10 ಗಂಟೆ.

ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಲಿಂಗಾನಂದ ಮಹಾ ಸ್ವಾಮೀಜಿ
ಅವರ ದಿವ್ಯ ಸನ್ನಿಧಿಯಲ್ಲಿ

ಬಸವ ಧ್ವಜಾರೋಹಣ	:	ಶರಣ. ಎಸ್.ಪಿ. ಪಾಟೀಲ್, ಈಚಲಕರಂಜಿ
ಅಧ್ಯಕ್ಷತೆ	:	ಶರಣ. ಕುಮಾರ ಕಕ್ಕಯ್ಯ ಪೋಳ, ಬಿಜಾಪುರ
ಸಭಾಪತಿ	:	ಶರಣ. ಎನ್.ಪುಟ್ಟರುದ್ರಪ್ಪ, ಬೆಂಗಳೂರು
ಉದ್ಘಾಟನೆ	:	ಶರಣ. ಸಿ.ಎಂ. ಚಂದ್ರಶೇಖರ, ಹಾಸನ
ಮುಖ್ಯ ಅತಿಥಿ	:	ಪೂಜ್ಯ ಶ್ರೀ ಗುರುಪಾದದೇವರು, ರೋಣ
ಪ್ರಸ್ತಾವನೆ	:	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಚಿಂತನ-ಮಂಥನ	:	ಶರಣ - ಶರಣೆಯರಿಂದ

ಸದಸ್ಯರ ಹಾಜರಿ ತೆಗೆದುಕೊಂಡ ಬಳಿಕ ಚರ್ಚಾಗೋಷ್ಠಿ ಆರಂಭ. ಬಸವ ಧರ್ಮ ಸಂಸತ್ ಸದಸ್ಯರು ಮರೆಯದೆ ಕೊರಳ ಪದಕ ಹಾಕಿಕೊಂಡು ಬರಬೇಕು.

ಚರ್ಚಿಸಲಾಗುವ ವಿಷಯಗಳು

೧. ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ ಆಚರಣೆ
೨. ಪ್ರತಿ ಊರಲ್ಲಿಯೂ ವಾರ್ಷಿಕ ಗಣ ಸಮಾವೇಶ
೩. ರಾಷ್ಟ್ರೀಯ ಬಸವ ದಳದಿಂದ ಯೋಗ ಶಿಕ್ಷಣ
೪. ಯೋಗ ತರಬೇತಿ ಶಿಬಿರ ನಡೆಸುವಿಕೆ
೫. ಶರಣವ್ರತ ಸ್ವೀಕಾರ - ನಿಯಮಗಳ ರಚನೆ
೬. ಮಂಟಪ - ಮಠಗಳಲ್ಲಿ ನಿತ್ಯ ಉಗ್ಘಡಣೆ (ಪ್ರಾರ್ಥನೆ)
೭. ರಾಷ್ಟ್ರೀಯ ಬಸವ ದಳಗಳ ಪ್ರಕಟಣೆ - ಕೇಂದ್ರದ ಪೂರ್ವಾನುಮತಿ
೮. ಬಸವ ಧರ್ಮದ ಎರಡನೆಯ ಸಮ್ಮೇಳನ
೯. ಧರ್ಮ ಪ್ರಚಾರದ ವ್ಯವಸ್ಥೆ ಹೇಗೆ ? ಯಾರಿಂದ ?
೧೦. ನವರಾತ್ರಿ ಆಚರಣೆ, ಬನ್ನಿ ಕೊಡುವ ಸಂಪ್ರದಾಯ ಸರಿಯೆ ?

ಈ ವಿಷಯಗಳನ್ನು ವಿವಿಧ ಶರಣ ಬಂಧುಗಳು ಸೂಚಿಸಿದ್ದಾರೆ. ಭಾಗವಹಿಸಿದವರು ಯಾವುದಾದರೂ ಮಹತ್ವಪೂರ್ಣ ಪ್ರಶ್ನೆಗಳನ್ನು ಸೂಚಿಸಿದರೆ ಅದರ ಪ್ರಾಮುಖ್ಯತೆಯ ಆಧಾರದ ಮೇಲೆ ಅದನ್ನು ಚರ್ಚೆ- ನಿರ್ಣಯಗಳಿಗೆ ಎತ್ತಿಕೊಳ್ಳಲಾಗುವುದು. ಕೇಳುವ ಸಮಸ್ಯೆಗಳೇನಾದರೂ ಇದ್ದರೆ ಸಿದ್ಧತೆ ಮಾಡಿಕೊಂಡು ಬರಬಹುದು ಮತ್ತು ಮೇಲೆ ಸೂಚಿಸಿದ ವಿಷಯಗಳ ಬಗ್ಗೆ ಸದಸ್ಯರು ಮಾತ್ರವಲ್ಲದೆ ಇನ್ನಿತರ ಶರಣ ಬಂಧುಗಳು ಸಹ ಚಿಂತನೆ ಮಾಡಿಕೊಂಡು ಬಂದರೆ ಒಳ್ಳಿತು.

ಸಮ್ಮುಖ

ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭು ಸ್ವಾಮೀಜಿ, ಶಿರಗುಪ್ಪಿ
ಪೂಜ್ಯ ಶ್ರೀ ಸದ್ಗುರು ವಿಜಯಕುಮಾರ ಸ್ವಾಮಿಗಳು, ಮೀರಜ
ಪೂಜ್ಯ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು, ವಿರಕ್ತಮಠ, ತೇರದಾಳ
ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು, ಚಿಕ್ಕಮಗಳೂರು
ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಹಿರೇಮಠ, ಭಾಲ್ಕಿ
ಪೂಜ್ಯ ಶ್ರೀ ಬಸವಾನಂದ ಸ್ವಾಮಿಗಳು, ಕೂಡಲಸಂಗಮ
ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು, ಮಡಿಕೆಶಿರೂರು
ಪೂಜ್ಯ ಶ್ರೀ ನಿತ್ಯಾನಂದ ಸ್ವಾಮಿಗಳು, ಸತ್ತಿ
ಪೂಜ್ಯ ಶ್ರೀ ಮಹಾನಂದಾ ತಾಯಿ ಹಿರೇಮಠ, ಮುಗಳಿ
ಪೂಜ್ಯ ಶ್ರೀ ಬಸಮ್ಮತಾಯಿ, ಗುಲಬರ್ಗಾ

ಶರಣರುಗಳಾದ :

ಅಂದಾನಪ್ಪ, ಕುಂದರಗಿ, ಗಜೇಂದ್ರಗಡ
ಡಾ|| ಜಿ.ಆರ್. ತಮಗೊಂಡ, ಬಾಗಿಲಕೋಟೆ
ಡಾ|| ಸಿ.ಎಸ್. ಪುರಾಣಮಠ, ರಾಣೇಬೆನ್ನೂರು
ಎಸ್.ಎಸ್. ಹಿರಂಡಗಿ, ಬಿಜಾಪುರ
ಆರ್.ಸಿ. ಸದಾಶಿವನ್, ಸಕಲೇಶಪುರ
ಬಸವರಾಜ ಲುಕ್, ಬಾಗಲಕೋಟೆ
ಬಸವರಾಜ ಮಡಿವಾಳರ, ಆಲಮಟ್ಟಿ
ಹೆಚ್.ಎಸ್. ಬಸವರಾಜ, ಭದ್ರಾವತಿ
ಜಯಮ್ಮ ಚಂದ್ರಪ್ಪ, ಶಿವಮೊಗ್ಗ
ಟಿ. ಬಸವರಾಜಪ್ಪ, ವಿಜಯಪುರ
ಬಸವಕುಮಾರ ಪಾಟೀಲ, ಬೀದರ್
ಡಾ|| ಶಿವಗೌಡ ಪಾಟೀಲ, ಸಂಕೇಶ್ವರ
ಬಾಣೂರು ಚನ್ನಪ್ಪ, ಅಜ್ಜಂಪುರ
ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ
ಚಂದ್ರಶೇಖರಪ್ಪ ಕರವೀರಶೆಟ್ಟರು ಹುಬ್ಬಳ್ಳಿ
ಎಸ್.ಬಿ. ಸುಲ್ತಾನಪುರಿ, ಬೆಳಗಾಂವ
ಮುನಿನಾರಾಯಣಪ್ಪ, ವಿಜಯಪುರ
ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ
ಸರೋಜಮ್ಮ ಎಂ. ನಾಗರಾಜು, ಮೈಸೂರು
ವಿರೂಪಾಕ್ಷಪ್ಪ ಗಿರಿಸಾಗರ, ಜಮಖಂಡಿ
ನಿಜಲಿಂಗಪ್ಪ ಹೊಳಿ, ಬಿಜಾಪುರ
ಬಿ.ವಿ. ಹಂಪನಗೌಡರು, ಬಿಜಾಪುರ
ಶಿವಶಂಕರ್ ನಾಗಪ್ಪ ಕಾಡಾದಿ, ಸೊಲ್ಲಾಪುರ
ಕಲ್ಲಿನಾಥ ಕೊಂಡಗುಳಿ, ಹುಬ್ಬಳ್ಳಿ
ಬಿ.ಎಂ. ರುದ್ರಶೆಟ್ಟಿ, ಹಾಸನ
ಈಶ್ವರಯ್ಯ, ವೀ.ಮ.ಸ. ಅನಂತಪುರ
ಸು. ಸದಾಶಿವಪ್ಪ, ಚಾಮರಾಜನಗರ
ಎಂ. ನಂಜಪ್ಪ, ಕೆ. ಆರ್. ಪೇಟೆ

ಎಸ್. ಲಿಂಗಣ್ಣ, ಚಿತ್ರದುರ್ಗ
ಗುರುಲಿಂಗಮೂರ್ತಿ, ಬೆಂಗಳೂರು
ಬಾಲಚಂದ್ರ, ಚೆನ್ನಿ, ಮಹಾಲಿಂಗಪುರ
ಚಂದ್ರಶೇಖರಪ್ಪ ಯರನಾಳ, ಇಳಕಲ್
ವಿಶ್ವನಾಥ ಡೋಣೂರು, ಶಹಾಪುರ
ಜಿ.ಜಿ. ಪಾಟೀಲ್, ಕೂಡಲಸಂಗಮ
ಆರ್.ಎಸ್. ಹೊನ್ನಪ್ಪನವರು, ಧಾರವಾಡ
ಬಿ.ಎಂ. ಹೊರಕೇರಿ, ಬಾದಾಮಿ
ಡಿ.ಬಿ. ಕೊಳ್ಳಿ, ಬೈಲಹೊಂಗಲ
ಮೃತ್ಯುಂಜಯ ಅಂಗಡಿ, ಕಡಕೋಳ
ಎಂ.ಎಂ. ಹುಂಡೇಕಾರ, ಬಿಜಾಪುರ
ಎಲ್. ಗುರುಸ್ವಾಮಿ, ಬೆಂಗಳೂರು
ಸಿದ್ಧರಾಮಪ್ಪ, ಬಾಳಪ್ಪಗೋಳ್, ಗುಲ್ಬರ್ಗಾ
ಜಿ. ಚನ್ನಯ್ಯ, ಚಳ್ಳಕೆರೆ
ಬಸವರಾಜ ಹೋಳೀಕಟ್ಟಿ, ಮೀರಜ
ಸಿ. ಬಸವರಾಜು, ತುಮಕೂರು
ಬಸವರಾಜಪ್ಪ ನಾಡಗೌಡ, ಗಣಜಲಿ
ಬಾಣೂರು ಹಿರಣ್ಣಯ್ಯ, ತರೀಕೆರೆ
ಶಿ. ರುದ್ರಸ್ವಾಮಿ, ಮೈಸೂರು
ಕೂಡಲಸಂಗಮ ಉಮರಾಣಿ, ಐಗಳಿ
ಆರ್. ಮಲ್ಲಿಕಾರ್ಜುನಪ್ಪ, ಬಾಗೇಪಲ್ಲಿ
ಡಿ.ಎಸ್. ವಿಜಯಕುಮಾರ್, ಶಿವಮೊಗ್ಗ
ಲಿಂಗರಾಜು ಇಂಗಳಳ್ಳಿ, ಹುಬ್ಬಳ್ಳಿ
ರಾಮಚಂದ್ರಪ್ಪ, ಚಿತ್ರದುರ್ಗ
ಜೈರಾಜ್ ವಕೀಲರು, ಬೆಂಗಳೂರು
ಟಿ.ಎ. ದಾಸಪ್ಪ, ತಿಪಟೂರು
ಜಿ. ಶಾಂತಯ್ಯ, ಗನ್ನಾಯ್ಯನಹಳ್ಳಿ
ಬಸವರಾಜು, ತಿಮ್ಮಪ್ಪಯ್ಯನಹಳ್ಳಿ

ಇನ್ನಿತರ ಬಸವ ಧರ್ಮ ಸಂಸತ್ ಸದಸ್ಯರು
ರಾಷ್ಟ್ರೀಯ ಬಸವ ದಳಗಳ ಸಂಘಟಕರು, ಸಂಚಾಲಕರು, ಸದಸ್ಯರೂ
ಆದ ಶರಣ - ಶರಣೆಯರು.

ಬಸವ ಧರ್ಮದ ಮಹಾಜಗದ್ಗುರು ಪೀಠದ

ಎರಡನೆಯ ವಾರ್ಷಿಕೋತ್ಸವ

ಬಸವಶಕೆ 888 — ವೇಳೆ : ಸಂಜೆ 5 ಗಂಟೆ
ಬುಧವಾರ, ದಿ. 12-1-1994 — ಮಹಾಮನೆ ಮಹಾಮಠ

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು | ಧರೆಯವಗೆ
ವಶವಾಗದಿಹುದೆ ಸರ್ವಜ್ಞ ||

ಧರ್ಮಪಿತ ಶ್ರೀ ಗುರುಬಸವ ತಂದೆಯ ದಿವ್ಯ ಪ್ರೇರಣೆಯಂತೆ ಅವರು ಐಕ್ಯರಾದ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಬಸವ ಶಕೆ 886, ಸೋಮವಾರ13-1-1992ರಂದು ಸಂಸ್ಥಾಪನೆ ಮಾಡಲಾಯಿತು. ಇದರ ಉದ್ದೇಶ, ಬಸವ ತತ್ತ್ವದ ಪ್ರಚಾರ, ಸಮಾನತೆಯ ಪ್ರತಿಪಾದನೆ, ಜಾತಿ ವರ್ಣ ವರ್ಗ ಲಿಂಗ ಭೇದವಿಲ್ಲದೆ ಎಲ್ಲ ಮಾನವರ ಹಕ್ಕುಗಳನ್ನು ರಕ್ಷಿಸುವುದು; ಧರ್ಮನಿಷ್ಠೆ-ರಾಷ್ಟ್ರಪ್ರೇಮಗಳನ್ನು ಜನರಲ್ಲಿ ಬೆಳೆಸುವುದು, ಸಕಲ ಜೀವಾವಳಿಗೆ ಲೇಸನ್ನೇ ಬಯಸಿ, ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಕಲ್ಯಾಣ ರಾಜ್ಯವನ್ನು ಕಟ್ಟುವುದು.

ಇಂತಹ ಧರ್ಮಪೀಠವನ್ನು ಅಪೂರ್ವ ವಾಗ್ಮಿಗಳು, ಕ್ರಾಂತಿಕಾರಿ ಧರ್ಮ ಪ್ರಸಾರಕರು, ಬಸವ ಯುಗ ನಿರ್ಮಾಪಕರೂ ಆದ

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು

ಪ್ರಥಮ ಪೀಠಾಧೀಶರಾಗಿ ಆರೋಹಣ ಮಾಡಿದ್ದು, ಈ ಪೀಠಾರೋಹಣದ ವಾರ್ಷಿಕೋತ್ಸವವನ್ನು12-1-1994ರಂದು ಆಚರಿಸಲಾಗುತ್ತಿದೆ.

ಸಮ್ಮುಖ :
ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭುಸ್ವಾಮೀಜಿ
(ಮಂಗಲಮಠ, ಶಿರಗುಪ್ಪಿ)
ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ
(ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಧಾರವಾಡ)
ಪೂಜ್ಯ ಶ್ರೀ ಸದ್ಗುರು ವಿಜಯಕುಮಾರ ಸ್ವಾಮಿಗಳು
(ರುದ್ರ ಪಶುಪತಿ ಮಠ, ಮೀರಜ)
ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗ ಪಟ್ಟದ್ದೇವರು
(ಹಿರೇಮಠ ಸಂಸ್ಥಾನ, ಭಾಲ್ಕಿ)
ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು
(ಶ್ರೀ ಶಿವಯೋಗಾಶ್ರಮ, ಮಡಕೇಶಿರೂರು)
ಪೂಜ್ಯ ಶ್ರೀ ಬಸವಾನಂದ ಸ್ವಾಮಿಗಳು
(ಬಸವ ಧರ್ಮಪೀಠ, ಕೂಡಲಸಂಗಮ)

ಗೌರವಾರ್ಪಣೆ-

ರಾಷ್ಟ್ರೀಯ ಬಸವ ದಳದ ಸರ್ವೋಚ್ಚ ಸಮಿತಿ ಸದಸ್ಯರಿಂದ

ಶರಣ. ಎನ್. ಪುಟ್ಟರುದ್ರಪ್ಪ, ಬೆಂಗಳೂರು
ಶರಣ. ಕಲ್ಯಾಣಪ್ಪ ಪರಮಾದಿ, ಹುಬ್ಬಳ್ಳಿ
ಶರಣ. ಬಸವಕುಮಾರ್ ಪಾಟೀಲ್, ಬೀದರ
ಶರಣ. ಎಸ್. ಲಿಂಗಣ್ಣ, ಚಿತ್ರದುರ್ಗ
ಶರಣ. ಸುಬ್ಬಣ್ಣ ನಂಜಪ್ಪ ಮೈಸೂರು, ಧಾರವಾಡ
ಶರಣೆ. ಶಾರದಮ್ಮ ಭೀಮಲಿಂಗನಗೌಡ, ಬಳ್ಳಾರಿ
ಶರಣೆ. ಜಯಮ್ಮ ಚಂದಪ್ಪ, ಶಿವಮೊಗ್ಗ
ಶರಣೆ. ಸರೋಜಮ್ಮ ನಾಗರಾಜು, ಮೈಸೂರು

ಮಾಲಾರ್ಪಣೆ : ವಿವಿಧ ರಾಷ್ಟ್ರೀಯ ಬಸವ ದಳಗಳವರಿಂದ, ವೈಯಕ್ತಿಕವಾಗಿ ಮತ್ತು ವಿವಿಧ ಶರಣ ಬಂಧುಗಳಿಂದ.

ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರಿಗೆ ಸತ್ಕಾರ.

೧. ಶರಣ. ಶಿವಶರಣಪ್ಪ ವಾಲಿ
(ಉತ್ತರ ಕರ್ನಾಟಕ ದಿನಪತ್ರಿಕೆ, ಬೀದರ)
೨. ಪ್ರವಚನಪಟು ಶರಣ. ದಾನಪ್ಪ ಜತ್ತಿ, ಶಾಸ್ತ್ರಿಗಳು
(ಪುರಾಣ, ಪ್ರವಚನ, ಕೀರ್ತನಕಾರರು, ತಿಕೋಟಾ)
೩. ಕೀರ್ತನಾಚಾರ್ಯ ಶರಣ. ಟಿ.ಎಂ. ಚಂದ್ರಶೇಖರ ಶಾಸ್ತ್ರಿಗಳು
(ಶ್ರೀ ಕುಮಾರೇಶ್ವರ ಕಲಾವೃಂದ, ಗದಗ)
೪. ಶರಣ. ಶಂಭುಲಿಂಗ ಸ್ವಾಮಿ ಶಾಸ್ತ್ರಿಗಳು
(ಪ್ರವಚನಕಾರರು, ದರೂರು)
೫. ಶರಣ. ಅರುಣಕುಮಾರ ಶೆಟಕಾರ
(ಮೇಯರ್, ಗುಲಬರ್ಗಾ ಮಹಾನಗರಪಾಲಿಕೆ)
೬. ಶರಣ. ಎಸ್.ಆರ್. ಗುಡಿಸಾಗರ
(ಬಸವೇಶ್ವರ ಇಂಜಿನಿಯರಿಂಗ್ ಕಾಲೇಜ್, ಬಾಗಲಕೋಟೆ)
೭. ಶರಣ. ಚಂದ್ರಶೇಖರ್
(ವಾಸ್ತುಶಿಲ್ಪ ತಜ್ಞರು, ಬಾಗಲಕೋಟೆ)

ವಿಶೇಷ ಮಾಹಿತಿ :

* ಶರಣ. ಹೂವಿನ ಮಲ್ಲಿಕಾರ್ಜುನಪ್ಪ ಚಳ್ಳಕೆರೆ, ಇವರು ಹೂವಿನ ಅಂಗಡಿಯನ್ನು ತೆರೆಯಲಿದ್ದು, ಮಾಲೆಗಳು ಲಭ್ಯವಿರುತ್ತವೆ.
* ಮಾಲಾರ್ಪಣೆ ಮಾಡುವವರು ಮೊದಲೇ ಹೆಸರನ್ನು ಕಾರ್ಯಕರ್ತರ ಬಳಿ ಕೊಡಬೇಕು.

ನುಡಿ ಕಾಣಿಕೆ ಸಮರ್ಪಣೆ

೧. ಪೂಜ್ಯ ಶ್ರೀ ಬಸವಾನಂದ ಸ್ವಾಮಿಗಳು, ಕೂಡಲಸಂಗಮ
೨. ಶರಣೆ. ಸಿಂಧೂತಾಯಿ ಶಿವಶಂಕರ ಕಾಡಾದಿ, ಸೊಲ್ಲಾಪುರ
೩. ಶರಣ. ರಾಜಶೇಖರ ಮಡಕಿ, ಸೊಲ್ಲಾಪುರ
(ಬಸವ ಸೆಂಟರ್, ಸೊಲ್ಲಾಪುರ)
೪. ಶರಣ. ಕರಿಬಸಪ್ಪ ಶಂಕರಪ್ಪ ಕೋರಿ
(ಬಸವ ಧರ್ಮ ಪ್ರಚಾರ ಸಂಸ್ಥೆ, ಬೆಳಗಾಲ ಪೇಟೆ)

ಉಪಸ್ಥಿತರಿರುವ ಗಣ್ಯರು :

ಶರಣ. ಶಿವಶಂಕರ ನಾಗಪ್ಪ ಕಾಡಾದಿ, ಸೊಲ್ಲಾಪುರ
ಶರಣ. ಎಸ್. ಶರಣಪ್ಪ, ಚಳ್ಳಕೆರೆ
ಶರಣ. ಎ.ಎಂ. ಬಸವೇಗೌಡರು, ಚಿಕ್ಕಮಗಳೂರು
ಶರಣ. ಎಂ.ಕೆ. ಮಲ್ಲಯ್ಯರಾಜ್, ಭವಾನಿ
ಶರಣ. ಆರ್.ಬಿ. ಹೆಬ್ಬಳ್ಳಿ, ಬಾಂಬೆ
ಶರಣ. ಪ್ರಕಾಶ ರಾಜಶೇಖರ ಮಹಾಜನ, ಅಥಣಿ
ಶರಣ. ಆರ್.ಐ. ಕಲ್ಯಾಣಶೆಟ್ಟಿ, ಮುಧೋಳ
ಶರಣ. ಪರ್ವತಪ್ಪ ಕೋರವಾರ, ಹೈದರಾಬಾದ್
ಶರಣ. ಸಿದ್ಧಯ್ಯ ಹೊಸಮಠ, ಮುಧೋಳ
ಶರಣ. ಜಿ.ಸಿ. ಚನಿವಾಲ ಶೆಟ್ಟರು, ಮುಧೋಳ
ಶರಣ. ಎಸ್. ಪುಟ್ಟಸಿದ್ದಪ್ಪ, ಬೆಂಗಳೂರು
ಶರಣ. ವಿರೂಪಾಕ್ಷಪ್ಪ ಗಿರಿಸಾಗರ, ಜಮಖಂಡಿ
ಶರಣ. ರಾವ್‌ಸಾಹೇಬ ಬಾಪೂಸಾಹೇಬ ಕಿತ್ತೂರಕರ, ಗಡಹಿಂಗ್ಲಾಜ್
ಶರಣ. ವಿಲಾಸ ಶಂಕರಪ್ಪ ಬಾಗಿ, ಗಡಹಿಂಗ್ಲಾಜ್
ಶರಣ. ಜೆ. ರಾಜು, ಸಕಲಟ್ಟಿ, ತಮಿಳುನಾಡು
ಶರಣ. ಗುರುಬಸಪ್ಪ ಕಾಟೇರಿ, ತಮಿಳುನಾಡು
ಶರಣ. ಗದಿಗೆಪ್ಪ ದೇಶನೂರು, ಬೈಲಹೊಂಗಲ
ಶರಣ. ವೀರಂತಪ್ಪ ನಾಗಪ್ಪ ಕಾಡಾದಿ, ಸೊಲ್ಲಾಪುರ

ದಾನಿಗಳಿಗೆ ಸತ್ಕಾರ

ಬಸವ ಧರ್ಮಪೀಠದ ಕಟ್ಟಡ ನಿಧಿ, ಪುಸ್ತಕ ಪ್ರಕಟಣೆ ಮುಂತಾದುವಕ್ಕೆ 5001-00ರೂ ಮತ್ತು ಮೇಲೆ ಕೊಟ್ಟ ದಾನಿಗಳಿಗೆ ಸತ್ಕಾರವಿರುತ್ತದೆ.

ಮಡಿವಾಳ ಮಾಚಯ್ಯನವರ ಕಾಲಜ್ಞಾನ

* ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನ ನೆರೆವರಯ್ಯ
ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
ಒಬ್ಬರುಳಿಯದ ಹಾಗೆ ನೆರೆದು ಕೂಡುವರು
ಆನಂದ ಕಡೆಯಾಟ ಜರಿಯಲು ಬೇಡ
ಶಿವನ ಡಂಗುರವೆಂದು ಕರವೆತ್ತಿ ಕೂಗಿ ||

ಷಟ್ಕೋನ ಬಸವ ಧ್ವಜಾರೋಹಣಕ್ಕೆ ಮೊದಲು
ಸಂಕಲ್ಪ ಪೂರ್ವಕವಾಗಿ ಹಾಡಬೇಕಾದ ಗೀತೆ

ಕರ್ತನ ಸೃಷ್ಟಿಯೊಳ್ ಹುಟ್ಟಿಹ ನಾನು
ಕರ್ತಗೆ ನಿಷ್ಠೆಯಿಂ ವಂದಿಪೆನು || ಪ ||

ಬಸವನ ಸ್ಮರಿಸಿ ಲೋಕದ ಲೇಸಿಗೆ
ಪೈಜೆಯ ತೊಟ್ಟು ದುಡಿಯುವೆನು || ಅ.ಪ. ||

ಭಕ್ತಿಯ ಜಲದೊಳು ಮೈತೊಳೆಯುವೆನು
ಜ್ಞಾನದ ವಸ್ತ್ರವ ಧರಿಸುವೆನು |
ದೀನದಲಿತರ ಸೇವೆಯ ಗೈಯಲು
ಗಂಧದ ಬಾಳನು ಸವೆಸುವೆನು || ೧ ||

ಮಾನವರೆಲ್ಲರು ದೇವನ ಮಕ್ಕಳು
ಎನ್ನುತ ಧ್ವಜವನು ಹಾರಿಪೆನು |
ಗುರುಬಸವಣ್ಣನ ವಚನದ ಸೌರಭ
ಹರಡಲು ಕಂಕಣ ಕಟ್ಟುವೆನು || ೨ ||

ಧರ್ಮದ ಕವಚದ ಧರಿಸುವೆನು
ತತ್ತ್ವದ ಖಡ್ಗವ ಹಿಡಿಯುವೆನು
ಕರ್ತನ ಕಮ್ಮಟವಾದೀ ಜಗದೊಳು
ಕಲ್ಯಾಣ ರಾಜ್ಯವ ಕಟ್ಟುವೆನು || ೩ ||

ರಚನೆ : ಜಗದ್ಗುರು ಮಾತೆ ಮಹಾದೇವಿ

ಷಟ್ಕೋನ ಬಸವ ಧ್ವಜ ಆರೋಹಣ

ದಿ. 13-1-1994 ಸುಪ್ರಭಾತದ 9-50ಕ್ಕೆ

ಪೂಜ್ಯ ಶ್ರೀ ನಿ ಪ್ರ. ಜಯಚಂದ್ರಶೇಖರ ಸ್ವಾಮಿಗಳು
(ಬಸವ ತತ್ತ್ವಪೀಠ, ಚಿಕ್ಕಮಗಳೂರು)

ಶರಣ ಮೇಳ - ಉದ್ಘಾಟನಾ ಸಮಾರಂಭ

ಗುರುವಾರ ದಿ. 13-1-1994 ಬೆಳಿಗ್ಗೆ 10 ಗಂಟೆ

ದಿವ್ಯ ಸನ್ನಿಧಿ	:	ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು (ಮಹಾಮನೆ ಮಹಾಮಠ, ಕೂಡಲಸಂಗಮ)
ಉದ್ಘಾಟನೆ	:	ಶರಣೆ. ಶ್ರೀಮತಿ ಬಸವರಾಜೇಶ್ವರಿ (ರಾಜ್ಯಮಂತ್ರಿ, ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೇಂದ್ರ ಸರ್ಕಾರ, ನವದೆಹಲಿ)
ಪ್ರಸ್ತಾವನೆ	:	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ (ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ)
ಮುಖ್ಯ ಅತಿಥಿಗಳು	:	ಶರಣ. ಡಾ|| ದೇ. ಜವರೇಗೌಡ, ಮೈಸೂರು (ಮಾಜಿ ಉಪಕುಲಪತಿಗಳು, ಉತ್ತುಂಗ ಸಾಹಿತಿಗಳು)
ಧ್ವನಿ ಸುರುಳಿ ಬಿಡುಗಡೆ	:	ಶರಣ. ಪ್ರೊ. ಹೆಚ್.ಎಂ. ಚನ್ನಯ್ಯ, ಮೈಸೂರು (ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು, ಶ್ರೇಷ್ಠ ಕವಿಗಳು)
ಧ್ವನಿ ಸುರುಳಿ	:	ಬಸವ ವಚನಾಮೃತ (ವಿಶ್ವಗುರು ಬಸವಣ್ಣನವರ ವಚನಗಳು)
ವಿಶೇಷ ಆಹ್ವಾನಿತರು	:	ಶರಣ. ಡಾ|| ಎಂ.ಪಿ. ನಾಡಗೌಡರು (ವಿಧಾನ ಪರಿಷತ್ ಸದಸ್ಯರು, ಬಾಗಲಕೋಟೆ) ಶರಣ. ಜಿ.ಎಸ್. ಪಾಟೀಲರು (ಶಾಸಕರು, ರೋಣ)
ಪ್ರಾರ್ಥನೆ	:	ರಾಷ್ಟ್ರೀಯ ಬಸವ ದಳ, ಚಳ್ಳಕೆರೆ
ಶರಣು ಶರಣಾರ್ಥಿ ಗೀತಾ ಗಾಯನ	:	ಶರಣ. ದಾನಪ್ಪ ಜತ್ತಿ, ತಿಕೋಟಾ
ಸ್ವಾಗತ	:	ಶರಣ. ಬಸವಕುಮಾರ್ ಪಾಟೀಲ, ಬೀದರ
ಮಾಲಾರ್ಪಣೆ ಮತ್ತು		ಶರಣ. ಎನ್. ಪುಟ್ಟರುದ್ರಪ್ಪ ಪ್ರಧಾನ ಕಾರ್ಯದರ್ಶಿ, ಶರಣ ಮೇಳ ಉತ್ಸವ ಸಮಿತಿ
ಶರಣು ಸಮರ್ಪಣೆ	:	ಶರಣ. ಜಿ.ಜಿ. ಪಾಟೀಲ ಪ್ರಧಾನ ಸಂಚಾಲಕರು, ಶರಣ ಮೇಳ ಉತ್ಸವ ಸಮಿತಿ

ಶರಣ ಮೇಳ - ರಾಷ್ಟ್ರೀಯ ಭಾವೈಕ್ಯತಾ ಗೋಷ್ಠಿ

ಗುರುವಾರ ದಿ. 13-1-1994 ಸಂಜೆ 4-30

ದಿವ್ಯ ಸನ್ನಿಧಿ	:	ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿ
	:	ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು (ಬಸವ ಮಂದಿರ, ಚಿಕ್ಕಮಗಳೂರು)
ಅಧ್ಯಕ್ಷತೆ	:	ಶರಣ. ರಂಗನಾಥ ಮಿಶ್ರ (ನಿವೃತ್ತ ಪರಮೋಚ್ಛ ನ್ಯಾಯಾಲಯದ ನ್ಯಾಯಾಧೀಶರು ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು, ನವದೆಹಲಿ)
ಪ್ರಸ್ತಾವನೆ	:	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಉದ್ಘಾಟನೆ	:	ಶರಣ. ಶ್ರೀ ಸರ್ದಾರ್ ಬೂಟಾಸಿಂಗ್ ಎಂ.ಪಿ. (ಅಧ್ಯಕ್ಷರು, ಭಾರತ ಏಕತಾ ಆಂದೋಲನ, ಮಾಜಿ ಗೃಹ ಸಚಿವರು, ನವದೆಹಲಿ)
ಮುಖ್ಯ ಅತಿಥಿ	:	ಶರಣ. ಕ್ಯಾಪ್ಟನ್. ಎಸ್. ರಾಜಾರಾವ್ ಎಂ.ಇ.ಎಂ.ಐ.ಇ. (ಪ್ರಧಾನ ಇಂಜಿನಿಯರ್, ಪದನಿಮಿತ್ತ ವಿಶೇಷ ಕಾರ್ಯದರ್ಶಿ, ಆಲಮಟ್ಟಿ)
ವಿಷಯ	:	''ಧ್ಯೇಯ-ಶಿಸ್ತು-ಸಂಕಲ್ಪ''ಗಳ ಅಗತ್ಯ
ಉಪನ್ಯಾಸಕರು	:	೧. ಶರಣ. ಪ್ರೊ. ನಂಜುಂಡಸ್ವಾಮಿ (ರೈತ ಸಂಘದ ನೇತಾರರು)
ವಿಷಯ	:	ಸ್ವರಾಜ್ಯ-ಸುರಾಜ್ಯದ ಪರಿಕಲ್ಪನೆ
		೨. ಶರಣ. ರಂಜಾನ್ ದರ್ಗಾ (ವಿಚಾರವಾದಿ ಬರಹಗಾರರು)
ವಿಷಯ	:	ವಿಶ್ವಗುರು ಬಸವಣ್ಣನವರು-ಪ್ರವಾದಿ ಮೊಹಮ್ಮದ್ ಪೈಗಂಬರ್ — ತೌಲನಿಕ ಅಧ್ಯಯನ
		೩. ಪೂಜ್ಯ ಶ್ರೀ ವೀರಮಹಾಂತೇಶ ಶಿವಾಚಾರ್ಯರು (ತಿಮ್ಮಪ್ಪಯ್ಯನ ಮಠ, ನೀಲಗುಂದ)
ವಿಷಯ	:	ಭಾರತಕ್ಕೆ ಇಂದು ಅಗತ್ಯವಿರುವ ದೇವಾಲಯಗಳು
ವಿಶೇಷ ಅತಿಥಿಗಳು	:	ಶರಣ. ಸುಬ್ಬಯ್ಯ ಶೆಟ್ಟಿ (ಮಾಜಿ ಸಚಿವರು, ಬೆಂಗಳೂರು)
ಸತ್ಕಾರ	:	ಶರಣ. ಮಹಾದೇವ ಹೊರಟ್ಟಿ (ಪ್ರಧಾನ ಕಾರ್ಯದರ್ಶಿ. ಭಾರತ ಏಕತಾ ಆಂದೋಲನ)
ಪ್ರಾರ್ಥನೆ	:	ರಾಷ್ಟ್ರೀಯ ಬಸವ ದಳ, ಬೆಂಗಳೂರು
ಸ್ವಾಗತ	:	ಎನ್. ಪುಟ್ಟರುದ್ರಪ್ಪ
ಸಭಾ ನಿರ್ವಹಣೆ	:	ಶರಣ. ಬಸವಕುಮಾರ್ ಪಾಟೀಲ
ಮಾಲಾರ್ಪಣೆ		ಶರಣ ಬಿ.ಎಂ. ರುದ್ರಶೆಟ್ಟಿ, ಹಾಸನ

ಶರಣ ಮೇಳ - ಶರಣೆಯರ ಗೋಷ್ಠಿ

ಗುರುವಾರ ದಿ.13-1-1994 ರಾತ್ರಿ 7-30

ಸನ್ನಿಧಿ	:	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ (ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ, ಧಾರವಾಡ)
ಸ್ವಾಗತ	:	ಶರಣೆ. ಶಶಿಕಲಾ ನಾಗರಾಜು ರಾಷ್ಟ್ರೀಯ ಬಸವ ದಳ, ಚಳ್ಳಕೆರೆ
ಅಧ್ಯಕ್ಷತೆ	:	ಶರಣೆ. ಮಾಲೂತಾಯಿ ಚಂದ್ರಕಾಂತಸ್ವಾಮಿ (ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಈಚಲಕರಂಜಿ)
ಉದ್ಘಾಟನೆ	:	ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿ (ವಿಶ್ವಕಲ್ಯಾಣ ಮಿಷನ್, ಬೆಂಗಳೂರು)
ಪುಸ್ತಕ ಬಿಡುಗಡೆ	:	ಶರಣೆ. ಸರೋಜಮ್ಮ ನಾಗರಾಜು (ರಾಷ್ಟ್ರೀಯ ಬಸವ ದಳ, ಮೈಸೂರು)
ಪುಸ್ತಕ	:	ಬಸವ ವಚನ ಸುಧಾ
ಉಪನ್ಯಾಸಕರು	:	೧. ಶರಣೆ. ಅನ್ನಪೂರ್ಣ ಹಂಗರಗಿ ಎಂ.ಎ.ಬಿ.ಎಡ್. (ಉಪನ್ಯಾಸಕಿ, ಬೀದರ)
ವಿಷಯ	:	ಧರ್ಮ ಪ್ರಚಾರದಲ್ಲಿ ಮಹಿಳೆಯರ ಪಾತ್ರ
		೨. ಶರಣೆ. ಶಾರದಾತಾಯಿ ಭೀಮಲಿಂಗನಗೌಡ
ವಿಷಯ	:	ರಾಷ್ಟ್ರೀಯ ಬಸವ ದಳಗಳ ಪ್ರಯೋಜನ
		೩. ಶರಣೆ. ವಿಜಯಾ ನಂಜುಂಡಪ್ಪ ಎಂ.ಎ.ಬಿ.ಎಡ್. (ಪ್ರಿನ್ಸಿಪಾಲ್, ಮದಕರಿ ನಾಯಕ ಕಾಲೇಜು, ಚಿತ್ರದುರ್ಗ)
ವಿಷಯ	:	ಧಾರ್ಮಿಕ ಸಂಸ್ಕಾರ-ಇಂದಿನ ಅಗತ್ಯ
ಸಭಾ ನಿರ್ವಹಣೆ	:	ಶರಣೆ. ಗಂಗಾಂಬಿಕಾ, ಬೀದರ
ಮಾಲಾರ್ಪಣೆ	:	ಶರಣೆ. ಜಯಮ್ಮ ಚಂದ್ರಪ್ಪ, ಶಿವಮೊಗ್ಗ

ವಿಶೇಷ ಕೀರ್ತನ ಕಾರ್ಯಕ್ರಮ

ರಾತ್ರಿ 10-00ಕ್ಕೆ

ಕೀರ್ತನಾಚಾರ್ಯ ಟಿ.ಎಂ. ಚಂದ್ರಶೇಖರ ಶಾಸ್ತ್ರಿಗಳು
ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ - ಅವರಿಂದ
ಶರಣರನ್ನು ಕುರಿತು ಸಂಕೀರ್ತನೆ

ಶುಕ್ರವಾರ ದಿ. 14-1-1994

ಬಸವ ಧ್ವಜಾರೋಹಣ - ಬಸವ ಜ್ಯೋತಿ ದರ್ಶನ

ಬಸವ ಕ್ರಾಂತಿ ದಿನದಂದು ಮಹಾಮನೆ ಮಹಾಮಠದಲ್ಲಿ ಬೆಳಿಗ್ಗೆ 9-00 ಗಂಟೆಗೆ ಬಸವ ಧ್ವಜಾರೋಹಣವನ್ನು ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ನೆರವೇರಿಸಿ, ಬಸವ ಜ್ಯೋತಿಯ ಉದ್ದೀಪನವನ್ನು ಮಾಡುವರು.

ಸಮಸ್ತ ಶರಣ ಬಂಧುಗಳೂ ಬಸವ ಜ್ಯೋತಿ ದರ್ಶನ ಮಾಡಿ, ಗುರುವಂದನೆ ಸಲ್ಲಿಸಿ, ಪಥ ಸಂಚಲನದ ಮೂಲಕ ಮಹಾಮನೆಯ ಬಸವ ಮಂಟಪದಿಂದ ಹೊರಟು ಕೃಷ್ಣಾ-ಮಲಪ್ರಭಾ ನದಿಗಳ ಸಂಗಮದಲ್ಲಿರುವ ಶ್ರೀ ಬಸವೇಶ್ವರ ಐಕ್ಯ ಮಂಟಪವನ್ನು ತಲ್ಪಿ, ಅಲ್ಲಿಂದ ಬಸವ ವನದಲ್ಲಿರುವ ಸಭಾಮಂಟಪಕ್ಕೆ ಆಗಮಿಸುವರು. ಸಭಾ ಮಂಟಪದ ಬಳಿ ಪೂಜ್ಯ ಶ್ರೀ ನಿ.ಪ್ರ. ಶಿವಲಿಂಗ ಸ್ವಾಮಿಗಳು, ತಣ್ಣೀರು ಹಳ್ಳ ಮಠ, ಹಾಸನ ಇವರು ಧ್ವಜಾರೋಹಣವನ್ನು ಪೂರೈಸುವರು.

ಶರಣ ಮೇಳ-ಸಮುದಾಯ ಪ್ರಾರ್ಥನೆ

ಬಸವಕ್ರಾಂತಿ ದಿನಾಚರಣೆ ಮತ್ತು ಶ್ರೀ ಸಿದ್ಧರಾಮೇಶ್ವರ ಜಯಂತಿ

ಶುಕ್ರವಾರ ದಿ. 14-1-1994 ಬೆಳಿಗ್ಗೆ 10-30

ದಿವ್ಯ ಸನ್ನಿಧಿ	:	ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಪೂಜ್ಯ ಶ್ರೀ ನಿ.ಪ್ರ. ಶಿವಲಿಂಗಸ್ವಾಮಿಗಳು (ತಣ್ಣೀರು ಹಳ್ಳಮಠ, ಹಾಸನ)
ಅಧ್ಯಕ್ಷತೆ	:	ಶರಣ. ವೀರಣ್ಣ ಎಸ್. ಕೌಜಲಗಿ (ಕರ್ನಾಟಕ ವಿಧಾನ ಸಭಾಧ್ಯಕ್ಷರು, ಬೆಂಗಳೂರು)
ಉದ್ಘಾಟನೆ	:	ಶರಣ. ಸಿ.ಎಸ್. ನಾಡಗೌಡ (ಮಾಜಿ ಸಚಿವರು, ಮುದ್ದೇಬಿಹಾಳ)
ಬಸವಮೂರ್ತಿ ಬಿಡುಗಡೆ	:	ಶರಣ. ಎನ್.ಎಸ್. ಪಾಟೀಲ (ಅಸಿಸ್ಟೆಂಟ್ ಚಾರಿಟಿ ಕಮೀಷನರ್, ಬೆಳಗಾಂವ)
ಪುಸ್ತಕ ಬಿಡುಗಡೆ	:	ಶರಣ. ಡಾ|| ಎಸ್. ಆರ್. ಗುಂಜಾಳ
ಪುಸ್ತಕ	:	ವಿಶ್ವಕಲ್ಯಾಣ ಗೀತೆ
ಧ್ವನಿ ಸುರುಳಿ ಬಿಡುಗಡೆ	:	ಶರಣ. ಸಿ. ಸೋಮಶೇಖರ್ (ಬೆಂಗಳೂರು ನಗರಜಿಲ್ಲೆ ವಿಶೇಷ ಜಿಲ್ಲಾಧಿಕಾರಿ)
ಧ್ವನಿ ಸುರುಳಿ	:	"ಶರಣ-ಸಂಗಮ"
ಮುಖ್ಯ ಅತಿಥಿಗಳು	:	ಶರಣ. ಎಂ.ಎಂ. ಗದಗಕರ (ಚೀಫ್ ಇಂಜಿನಿಯರ್, ಯು.ಕೆ.ಪಿ. ಆಲಮಟ್ಟಿ)
ಧ್ವನಿ ಸುರುಳಿ ಬಿಡುಗಡೆ	:	ಪೂಜ್ಯ ಶ್ರೀ ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು (ವಿರಕ್ತ ಮಠ, ಕೆರೂರು)
ಧ್ವನಿ ಸುರುಳಿ	:	"ಬಸವ ಮಂತ್ರ ಪರಿಮಳ"

ಸಮುದಾಯ ಪ್ರಾರ್ಥನಾ ನಿರ್ವಹಣೆ

೧. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ, ಬೆಂಗಳೂರು
೨. ಪೂಜ್ಯ ಶ್ರೀ ಜಯಚಂದ್ರಶೇಖರ ಸ್ವಾಮಿಗಳು, ಚಿಕ್ಕಮಗಳೂರು
೩. ಪೂಜ್ಯ ಶ್ರೀ ಸದ್ಗುರು ಸದಾನಂದ ಪ್ರಭುಸ್ವಾಮಿಗಳು, ಶಿರಗುಪ್ಪಿ
೪. ಪೂಜ್ಯ ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು, ಭಾಲ್ಕಿ
೫. ಪೂಜ್ಯ ಶ್ರೀ ಶಿವಕುಮಾರ ಸ್ವಾಮಿಗಳು, ಮಡಿಕೆಶಿರೂರು
೬. ಪೂಜ್ಯ ಶ್ರೀ ಬಸವಾನಂದ ಸ್ವಾಮಿಗಳು, ಕೂಡಲಸಂಗಮ

ವಿಶೇಷ ಆಹ್ವಾನಿತ ಅತಿಥಿಗಳು

ಶರಣ. ಸು.ಶಿ. ನಾಗರಾಳೆ, ನ್ಯಾಯಾಧೀಶರು, ಬಿಜಾಪುರ
ಶರಣ. ಬಸವರಾಜ ಪಾಟೀಲ ಅಟ್ಟೂರು, ಶಾಸಕರು, ಬಸವ ಕಲ್ಯಾಣ
ಪ್ರತಿಜ್ಞಾವಿಧಿ, ಕುಸುರೆಳ್ಳಿನ ಹಂಚಿಕೆ, ಗುರುಕಾಣಿಕೆ ಸಮರ್ಪಣೆ, ಮಹಾಮಂಗಲಾಚರಣೆ

ಶರಣ ಮೇಳ - ಮಕ್ಕಳ ಗೋಷ್ಠಿ

ದಿ. 14-1-1994 ಶುಕ್ರವಾರ ಮಧ್ಯಾಹ್ನ 4-30

ಪ್ರಾರ್ಥನೆ	:	ಕುಮಾರಿ ಬಸವ ಶ್ರೀ
ಸ್ವಾಗತ	:	ಕುಮಾರಿ ಶೋಭಾ, ಕೂಡಲಸಂಗಮ
ಉದ್ಘಾಟನೆ	:	ಕುಮಾರಿ ವಚನ ಸುಧಾ, ಚಿತ್ರದುರ್ಗ
ಮುಖ್ಯ ಅತಿಥಿ	:	ಕುಮಾರಿ ಪುನೀತಾ ನಂಜುಂಡಪ್ಪ, ದಾವಣಗೆರೆ
ನೃತ್ಯಾಭಿನಯ	:	ಕುಮಾರಿ ಶೃತಿ ಕೆ.ಎಂ. ಭಟ್, ಸಿದ್ಧಾಪುರ ಕುಮಾರಿ ರೂಪಾ ಪಾಟೀಲ, ಈಚಲಕರಂಜಿ ಕುಮಾರಿ ಆರತಿ ಅಡಕಿಹಾಳ, ಬಾಗಲಕೋಟ ಕುಮಾರಿ ಕೆ.ಎಂ. ರೋಹಿಣಿ, ಕಂಪ್ಲಿ
ಉಪನ್ಯಾಸಗಳು	:	ಕುಮಾರಿ ಬಸವ ಶ್ರೀ, ಬೆಂಗಳೂರು ಕುಮಾರಿ ಶೃತಿ ಕೆ.ಎಂ. ಭಟ್, ಸಿದ್ಧಾಪುರ ಕುಮಾರಿ ಬಸವಶ್ರೀ ಶಿರಸಂಗಿ, ಧಾರವಾಡ ಕುಮಾರಿ ಜ್ಯೋತಿ ಗಂಗಾಧರ, ಬಾಗಲಕೋಟೆ
ಅಕ್ಕ-ಪ್ರಭು ಸಂವಾದ	:	ಶೋಭಾ ಮತ್ತು ಬಸವ ಶ್ರೀ
ನಿರ್ವಹಣೆ	:	ಶರಣೆ. ಸರೋಜಮ್ಮ ಡಾ|| ಸದಾಶಿವನಗೌಡ, ರಾಷ್ಟ್ರೀಯ ಬಸವದಳ, ಚಿತ್ರದುರ್ಗ
ನಿರ್ದೇಶನ	:	ಶರಣೆ. ಜಯಮ್ಮ ಚಂದ್ರಪ್ಪ, ಶಿವಮೊಗ್ಗ

ರಾಷ್ಟ್ರೀಯ ಬಸವದಳ, ಬೀದರ ಇದರ ಸದಸ್ಯ ಶರಣ-ಶರಣೆಯರಿಂದ
ಅಪೂರ್ವ ಕರಾಟೆ ಪ್ರದರ್ಶನ

ಸಾಂಸ್ಕೃತಿಕ ಕಾರ್ಯಕ್ರಮಗಳು

ಶುಕ್ರವಾರ ದಿ. 14-1-1994 ರಾತ್ರಿ 9-30

ಸುಪ್ರಸಿದ್ಧ ನೃತ್ಯಪಟು ವೈಜಯಂತಿ ವಿಜಯಕಾಶಿ, ಬೆಂಗಳೂರು ಇವರಿಂದ ವಚನಗಳ ಅಭಿನಯದ ಅಮೋಘ ನೃತ್ಯ.
ಕೀರ್ತನ ಕಲಾ ಕೋವಿದ ಶರಣ. ದಾನಪ್ಪ ಜತ್ತಿ ಶಾಸ್ತ್ರಿಗಳು, ತಿಕೋಟಾ ಅವರಿಂದ ಶರಣರನ್ನು ಕುರಿತು ಸಂಕೀರ್ತನೆ.

ಶರಣ ಮೇಳ - ಧರ್ಮ ಚಿಂತನಗೋಷ್ಠಿ

ಶುಕ್ರವಾರ ದಿ. 14-1-1994 ಸಂಜೆ 7-30

ದಿವ್ಯ ಸನ್ನಿಧಿ	:	ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು
ಅಧ್ಯಕ್ಷತೆ	:	ಶರಣ. ಬಿ.ಎಸ್. ಪಾಟೀಲ (ಚಾರಿಟಿ ಕಮೀಷನರ್, ಬೆಳಗಾಂವ)
ಪ್ರಸ್ತಾವನೆ	:	ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಉದ್ಘಾಟಕರು	:	ಶರಣ. ಎಸ್.ಬಿ. ಸಿದ್ನಾಳ (ಲೋಕಸಭಾ ಸದಸ್ಯರು, ಬೆಳಗಾಂವ)
ಮುಖ್ಯ ಅತಿಥಿಗಳು	:	ಶರಣ. ಬಾಬಾಗೌಡ ಪಾಟೀಲ (ಶಾಸಕರು ಮತ್ತು ರೈತ ಸಂಘದ ಧುರೀಣರು)
ವಿಷಯ	:	ಭಾರತದ ಪುನರ್ನಿರ್ಮಾಣದ ದೃಷ್ಟಿಯಿಂದ ಪಾನ ನಿಷೇಧದ ಆಗತ್ಯ
ಪುಸ್ತಕ ಬಿಡುಗಡೆ	:	ಪೂಜ್ಯ ಶ್ರೀ ಮ.ಘ.ಚ. ಬಸವಲಿಂಗ ಪಟ್ಟಾಧ್ಯಕ್ಷರು ಹಿರೇಮಠ, ಭಾಲ್ಕಿ
ಪುಸ್ತಕ	:	ಶ್ರೀ ಸಿದ್ಧರಾಮೇಶ್ವರ ವಚನಾಂಜಲಿ (ಮರಾಠಿ ಆವೃತ್ತಿ)
ವಿಶೇಷ ಆಹ್ವಾನಿತರು	:	ಶರಣ. ಎಸ್.ಆರ್. ಪಾಟೀಲ (ಚೇರ್ಮನ್, ಬಿ.ಟಿ.ಡಿ.ಎ., ಬಾಗಲಕೋಟೆ)
ಉಪನ್ಯಾಸಗಳು	:	೧. ಶರಣ. ಡಿ. ರಾಜಾ ಸಾಹೇಬ (ಉಪಾಧ್ಯಾಯರು, ಶಿರಾಳಕೊಪ್ಪ)
ವಿಷಯ	:	ಶರಣರ ಹೃದಯ ವೈಶಾಲ್ಯ
		೨. ಶರಣೆ. ಶಶಿಕಲಾ ತಾಯಿ ಮಡಕಿ (ಶರಣ ಸಾಹಿತಿಗಳು, ಸೊಲ್ಲಾಪುರ)
ವಿಷಯ	:	ವಚನ ವಾಙ್ಮಯಕ್ಕೆ ಸಿದ್ಧರಾಮೇಶ್ವರರ ಕೊಡುಗೆ
ಸತ್ಕಾರ	:	ಪುಸ್ತಕದ ದಾನಿಗಳಾದ ೧. ಶರಣ. ರಾಮಚಂದ್ರ ಪುಂಡಲೀಕ ತಾಕವಾಡೆ, ಈಚಲಕರಂಜಿ ೨. ಶರಣ. ವಿಮಲ್ ಅಣ್ಣಾಸಾಹೇಬ ಶಹಾಪುರೆ, ಈಚಲಕರಂಜಿ ೩. ಶರಣ. ಕೆ.ಎಂ. ಮರುಳಸಿದ್ಧ ಸ್ವಾಮಿ, ಆನೆಕೊಂಡ

ಸಾಮೂಹಿಕ ಇಷ್ಟಲಿಂಗ ಪೂಜೆ

ಶನಿವಾರ ದಿ. 15-1-1994 ಬೆಳಿಗ್ಗೆ 8 ಗಂಟೆ

ಬಸವ ತತ್ತ್ವದ ಜೀವಾಳ ಕರ್ತನ ಆರಾಧನೆ; ಸೃಷ್ಟಿಕರ್ತನನ್ನು ವಿಶ್ವದಾಕಾರದಲ್ಲಿ ಚುಳುಕಾಗಿಸಿಕೊಂಡು ಪೂಜಿಸುವುದು ಈ ಶಿವ ಪಥದ ಮುಖ್ಯ ಆಚರಣೆ. ಆದ್ದರಿಂದ ಪ್ರತಿವರ್ಷದಂತೆ ದಿ. 15-1-1994 ಶನಿವಾರದಂದು ಬೆಳಿಗ್ಗೆ 8 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಪೂಜೆಯನ್ನು ತೋರಿಸುವರು. ಅವರೊಡನೆ ಉಳಿದೆಲ್ಲ ಶರಣ - ಶರಣೆಯರು ಕುಳಿತುಕೊಂಡು ಇಷ್ಟಲಿಂಗಾರ್ಚನೆ ಮಾಡಬೇಕು. ಪೂಜಾ ಪರಿಕರಗಳನ್ನು ತೆಗೆದುಕೊಂಡು ಭಾಗಿಗಳಾಗಬೇಕು. ದಿನ ನಿತ್ಯ ಮಾಡುವ ಕ್ರಿಯೆ ಎಂದು ಉದಾಸೀನ ಮಾಡಬಾರದು. ಸಾಮೂಹಿಕ ತಪಸ್ಸಿನಲ್ಲಿ ಅದ್ಭುತ ಶಕ್ತಿಯಿದೆ. ಸಾಮೂಹಿಕ ಸಂಕಲ್ಪದಲ್ಲಿಯೇ ವ್ಯಕ್ತಿ ಮತ್ತು ಸಮಾಜಗಳಿಗೆ ಅಮೂಲ್ಯ ಭವಿಷ್ಯವಿದೆ. ನಂತರ ತೀರ್ಥಪ್ರಸಾದ ವಿತರಣೆ ಇರುವುದು.

ಇಷ್ಟಲಿಂಗಪೂಜಾ ವಿಧಾನವನ್ನು ಕಲಿಸುವ ದೇವಪೂಜಾ ವಿಧಾನದ ನೂತನ ಆವೃತ್ತಿ ಸಿದ್ಧವಾಗಿದ್ದು, ಬಿಡುಗಡೆಯಾಗಿದೆ. ಪೂಜೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಈ ಪ್ರತಿ ಹೊಂದಿರಬೇಕು. ಇಷ್ಟಲಿಂಗಾರ್ಚನೆ ಕಲಿಸುವ ಆಡಿಯೋ ಕೆಸೆಟ್ಟು - ವಿಡಿಯೋ ಕೆಸೆಟ್ಟು ಎರಡೂ ಮಾರಾಟಕ್ಕೆ ಲಭ್ಯವಿರುತ್ತವೆ.

ರಾಷ್ಟ್ರೀಯ ಬಸವ ದಳಗಳ ಏಳನೆಯ ಮಹಾಧಿವೇಶನ ಮತ್ತು ಶರಣ ಮೇಳ ಸಮಾರೋಪ ಸಮಾರಂಭ

ಶನಿವಾರ ದಿ. 15-1-1994 ಬೆಳಿಗ್ಗೆ 10-30 ರಿಂದ 12-30

ಧ್ವಜಾರೋಹಣ : ಪೂಜ್ಯ ಶ್ರೀ ಗುರುಪಾದ ದೇವರು, ರೋಣ

ಸನ್ನಿಧಿ : ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು

ಅಧ್ಯಕ್ಷತೆ : ಪೂಜ್ಯ ಶ್ರೀ ನಿ.ಪ್ರ. ಶಿವಲಿಂಗ ಸ್ವಾಮಿಗಳು

ಉದ್ಘಾಟನೆ : ಪೂಜ್ಯ ಶ್ರೀ ಸದ್ಗುರು ವಿಜಯಕುಮಾರ ಸ್ವಾಮಿಗಳು (ರುದ್ರಪಶುಪತಿ ಮಠ, ಮೀರಜ)

ಮುಖ್ಯ ಅತಿಥಿ : ಶರಣ. ಕೆ. ಆರ್. ಲಿಂಗಪ್ಪ (ಜನಪದ ಸಾಹಿತಿಗಳು, ತರೀಕೆರೆ)

ಪ್ರಾಸ್ತಾವಿಕ ಭಾಷಣ : ಶರಣ. ಬಸವ ಕುಮಾರ್ ಪಾಟೀಲ (ಕಾರ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ರಾ.ಬ. ದಳ)

ಉಪನ್ಯಾಸಕರು :
೧. ಶರಣ ಡಾ|| ನಿತೀನ ಚಂದ್ರ ಹತ್ತೀಕಾಳ (ಗೌರವಾಧ್ಯಕ್ಷರು, ಕ.ರಾ.ರಾ.ಬ. ದಳ)
೨. ಶರಣ. ಎಸ್. ಲಿಂಗಣ್ಣ (ರಾ.ಬ. ದಳ. ಚಿತ್ರದುರ್ಗ)
೩. ಶರಣ. ಡಿ.ಎಸ್. ವಿಜಯಕುಮಾರ್ (ಬಸವ ಕಿರಣ ಸಂಪಾದಕರು, ಶಿವಮೊಗ್ಗ)

ವಿಷಯ : ರಾಷ್ಟ್ರೀಯ ಬಸವ ದಳ ಮತ್ತು ಯೋಗಾಭ್ಯಾಸ

೪. ಶರಣ. ಸಿ.ಎಂ. ಚಂದ್ರಶೇಖರ (ಕಾರ್ಯಾಧ್ಯಕ್ಷರು, ರಾಷ್ಟ್ರೀಯ ಬಸವ ದಳ, ಹಾಸನ)

ಸಭಾ ನಿರ್ವಹಣೆ : ಶರಣೆ. ಅನ್ನಪೂರ್ಣ ಹಂಗರಗಿ

ಮಹತ್ವಪೂರ್ಣ ನಿರ್ಣಯಗಳ ಘೋಷಣೆ -12-45 ರಿಂದ

ಮಂಡನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ (ಕಾರ್ಯಾಧ್ಯಕ್ಷೆ, ಬಸವ ಧರ್ಮ ಸಂಸತ್)

ಅನುಮೋದನೆ : ಶರಣ ಸಮುದಾಯದಿಂದ

ಘೋಷಣೆ : ಶರಣ ಸಮುದಾಯದ ಎದುರಿಗೆ

ವಿಶೇಷ ಸೂಚನೆ :ಈ ವೇದಿಕೆಯ ಮೇಲೆ ಮುಕ್ತ ಚರ್ಚೆಗೆ ಅವಕಾಶ ಇರುವುದಿಲ್ಲ ಮತ್ತು ಪ್ರಸ್ತುತ ಸಭೆಯಲ್ಲಿ ಘೋಷಿಸಲಾಗುವ ವಿಷಯಗಳನ್ನು ದಿ. 12-1-1994 ರಂದು ಬೆಳಿಗ್ಗೆ 10 ಗಂಟೆಗೆ ನಡೆಯುವ ಬಸವ ಧರ್ಮ ಸಂಸತ್ ಸಭೆಯಲ್ಲೇ ಚರ್ಚಿಸಲಾಗುವುದು. ಈ ಚರ್ಚಾ ಗೋಷ್ಠಿಯಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಅವಕಾಶ ಇರುವುದರಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆನ್ನುವ ಶರಣರು ಆ ಗೋಷ್ಠಿಯಲ್ಲಿ ಭಾಗವಹಿಸಬೇಕು.

ಬಸವ ಭಕ್ತರ ಪ್ರತಿಜ್ಞೆ

ಬಸವ ಭಕ್ತರು ನಾವು ಬಸವ ಭಕ್ತರು
ತತ್ತ್ವನಿಷ್ಠರು ನಾವು ತತ್ತ್ವನಿಷ್ಠರು || ಪ ||

``ಧರ್ಮಗುರು ಬಸವಣ್ಣ'' ಎಂದು ಸಾರಿ ನುಡಿವೆವು
``ವಚನ ಶಾಸ್ತ್ರ ಸಂವಿಧಾನ'' ಎಂದು ತಿಳಿದು ನಡೆವೆವು
``ಇಷ್ಟಲಿಂಗ ದೇವಕುರುಹು'' ಎಂದು ನಂಬಿ ಪೂಜಿಪೆವು
``ಸಂಗಮವು ಧರ್ಮಕ್ಷೇತ್ರ'' ಎಂದು ತಿಳಿದು ಬರುವೆವು. || ೧ ||

``ಷಟ್ಕೋನ ಬಸವ ಧ್ವಜವ'' ಹಿಗ್ಗಿನಿಂದ ಹಾರಿಪೆವು
``ಕಲ್ಯಾಣ ರಾಜ್ಯ'' ಕಟ್ಟುವ ಧ್ಯೇಯವಿಟ್ಟು ದುಡಿವೆವು
``ಶರಣ ಮೇಳ''ದಲ್ಲಿ ಕೂಡಿ, ಹಾಡಿ ಪಾಡಿ ನಲಿವೆವು
``ಬಸವ ಧರ್ಮಪೀಠ''ದ ಆದೇಶದಂತೆ ನಡೆವೆವು || ೨ ||

``ಅಷ್ಟಾವರಣ'' ಅಂಗವೆಂದು ನಾವು ನಿತ್ಯ ಧರಿಪೆವು
``ಪಂಚಾಚಾರ'' ಪ್ರಾಣವೆಂದು ಅನುಷ್ಠಾನ ಗೈವೆವು
``ಷಟಸ್ಥಲ'' ಶಿವಪಥದಿ ಶ್ರದ್ಧೆಯಿಂದ ಸಾಗುವೆವು
ಗುರುಬಸವ ತಂದೆಯು ಮೆಚ್ಚುವಂತೆ ಬಾಳುವೆವು || ೩ ||

ಜಾತಿವಾದ ಮನುಜಗೈದ ತಂತ್ರವೆಂದು ಸಾರುವೆವು
ನೀತಿಸಿರಿಯು ಒಂದೆ ಶ್ರೇಷ್ಠ ಸೂತ್ರವೆಂದು ತಿಳಿವೆವು
ದೇವನೊಬ್ಬ ನಮ್ಮ ತಂದೆ ಮನುಜರೆಲ್ಲರೊಂದೆ ಎಂದು
ವಿಶ್ವಸೋದರತ್ವ ಸಾರಿ ಕಲ್ಯಾಣರಾಜ್ಯ ಕಟ್ಟುವೆವು || ೪ ||

— ಜಗದ್ಗುರು ಮಾತೆ ಮಹಾದೇವಿ

[ಬಸವ ತತ್ತ್ವಾನುಯಾಯಿಯ ಜೀವನದ ನಂಬಿಕೆ ಆಚರಣೆ ಹೇಗಿರಬೇಕೆಂಬುದನ್ನು ತಿಳಿಸುವ ಈ ಪದ್ಯವನ್ನು ಮನನ ಮಾಡಬೇಕು, ಕಲಿಯಬೇಕು.]

ಕಲ್ಯಾಣ ಕಿರಣ KRNB 312/BGW 92, Jan 1994

ಶರಣಮೇಳ ಉತ್ಸವ ಸಮಿತಿ

ಮಹಾಮನೆ ಮಹಾಮಠ

ಕೂಡಲ ಸಂಗಮ-587 115, ತಾ-ಹುನಗುಂದ, ಜಿಲ್ಲಾ-ಬಿಜಾಪುರ

ಬಸವ ಕ್ರಾಂತಿ (ಸಂಕ್ರಾಂತಿ) ದಿನದಂದು
ಸಮುದಾಯ ಪ್ರಾರ್ಥನೆ, ಶುಕ್ರವಾರ. ದಿ. 14-1-1994
ಬೆಳಿಗ್ಗೆ 10-30 ಕ್ಕೆ



ಶರಣ ಮೇಳ ಉತ್ಸವ ಸಮಿತಿ
ಮಹಾಮನೆ ಮಹಾಮಠ
ಕೂಡಲ ಸಂಗಮ - 587 115

Sharana Mela Utsava Samithi
Mahamane Mahamatha
Kudala Sangama - 587 115